ದಿನಾಂಕ 03-06-2025 ರಂದು ಸಾಕ್ಷಿಗೆ ಪ್ರಮಾಣ ವಚನ  ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ  ಪ್ರತಿವಾದಿಯವರ ಪರವಾಗಿ  ಶ್ರೀ ಪಿ. ಕೆ. ವಕೀಲರವರಿಂದಃ**

ನನ್ನ ಬಳಿ ಕಾರು ಇದೆ, ಆದರೆ ನಾನು ಬಸ್ಸಿನಲ್ಲಿ ಪ್ರಯಾಣ ಮಾಡುತ್ತೇನೆ. ಬಸ್ಸಲ್ಲಿ ಕುಕ್ಕೇ ಸುಬ್ರಹ್ಮಣ್ಯದಿಂದ ಉಡುಪಿಗೆ ಬರಲು ಮೂರುವರೆ ಗಂಟೆ ಬೇಕಾಗುತ್ತದೆ. ನಾನು ನನ್ನ ಅಜ್ಜಿ ಚೆಲುವಮ್ಮನಿಗೆ ಹುಷಾರು ಇಲ್ಲದೆ ಇದ್ದರೆ  ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತೇನೆ. ಗುಂಡಿಬೈಲಿನಲ್ಲಿರುವ ಆಸ್ಪತ್ರೆ ಗೆ ಚಿಕಿತ್ಸೆ ಗೆ ಹೋಗಿರುತ್ತೇನೆ.  ಸದ್ರಿ ವೈದ್ಯರು ತಪಾಸಣೆ ಮಾಡಿ ಮಾತ್ರೆಗಳನ್ನು ಚೀಟಿಯಲ್ಲಿ ಬರೆದುಕೊಡುತ್ತಿದ್ದರು. ಅವರಿಗೆ ಸಾಮಾನ್ಯ ಜ್ವರ ಬರುತ್ತಾ ಇತ್ತು.  ಔಷದಿಗೆ ಖರ್ಚು ಮಾಡಿದ ಬಿಲ್ಲನ್ನು ಇಟ್ಟುಕೊಂಡಿಲ್ಲ ಮತ್ತು ವೈದ್ಯರ ಮಾತ್ರೆ ಚೀಟಿಗಳನ್ನು ಇಟ್ಟುಕೊಂಡಿಲ್ಲ ನಾನು ಕುಕ್ಕೆ ಸುಬ್ಬಹ್ಮಣ್ಯದಿಂದ ಬಂದು ನನ್ನ ಅಜ್ಜಿ ಯನ್ನು ನೋಡುತ್ತಿರಲಿಲ್ಲ ಎಂದರೆ ಸರಿಯಲ್ಲ.  ನನ್ನ ಅಜ್ಜಿಗೆ ಜ್ಞಾಪನ ಶಕ್ತಿ, ನಡೆದಾಡುವ ಶಕ್ತಿ, ಮತ್ತು ಬಿ ಪಿ , ಶುಗರ್ ಖಾಯಿಲೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜಿಗೆ ತಿಂಗಳಿಗೆ ಎಷ್ಟು ಖರ್ಚು ಆಗುತ್ತಿತ್ತು ಎಂದು ನೆನಪಿಲ್ಲ.  ನನ್ನ ತಂದೆ ಪದ್ಮನಾಭ ಅವರು ನ್ಯಾಯಾಲಯಕ್ಕೆ ಬಂದಿದ್ದರು ಎಂದರೆ ಗೊತ್ತಿಲ್ಲ. ಅವರಿಗೆ ವಯಸ್ಸಾಗಿದೆ ಆದರೆ ನಡೆಯಲು ಹಾಗೂ ನ್ಯಾಯಾಲಯಕ್ಕೆ ಬರಲು ತೊಂದರೆ ಇಲ್ಲ ಮತ್ತು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ತೊಂದರೆ ಇಲ್ಲ. ನಾನು ವೈಯಕ್ತಿಕವಾಗಿ ಲಿಖಿತ ಹೇಳಿಕೆ ಹಾಕಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಬಗ್ಗೆ ಅಫಿದಾವಿತ್ ನೀಡಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಬಗ್ಗೆ ನಾನೇ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ಸದ್ರಿ ವಿಷಯದ ಬಗ್ಗೆ ನನಗೆ ಮಾಹಿತಿ ಇದೆ. ನನ್ನ ಅಜ್ಜಿ ನನ್ನ ಹೆಸರಿಗೆ ವಿಲ್ ಮಾಡಿರುತ್ತಾರೆ. ಮತ್ತು ಸದ್ರಿ ಆಸ್ತಿ ನನಗೆ ವಿಲ್ ಮುಖಾಂತರ ಬರಬೇಕು ಎಂದು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುತ್ತೇನೆ. ಸದ್ರಿ ವಿಷಯ ಬಿಟ್ಟು ಬೇರೆ ಏನು

ಬರೆದಿರುವುದಿಲ್ಲ. ಈ ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಪಾಲು ಇಲ್ಲ ಎಂದರೆ ಸರಿಯಲ್ಲ. ಈ ಜಾಗದಲ್ಲಿ ಕೃಷ್ಣಯ್ಯ ಮತ್ತು ಚೆಲವಮ್ಮ ಅವರ ಮಕ್ಕಳಿಗೆ ಮಾತ್ರ ಹಕ್ಕು ಇರುತ್ತದೆ. ನನಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸದ್ರಿ ದಾವೆಯಲ್ಲಿ ನಾನು ಬೇಡಲಾರದ ಪಕ್ಷಗಾರ ಎಂದರೆ ಸರಿಯಲ್ಲ. ನಾನು ಪ್ರತಿಪಾದಿಸಿದ ವಿವಾದಿತ ವಿಲ್ ಮೋಸ ಮತ್ತು ವಂಚನೆಯಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಸದ್ರಿ ಜಾಗವನ್ನು ಕಬಳಿಸುವ ಉದ್ದೇಶದಿಂದ ವಿಲ್ ತಯಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ.ಮತ್ತು ಎಸಿಜೆಎಂ,
ಉಡುಪಿ.